**ಬುತ್ತಿ ಚಿಗುರು**

## ಡಾರ್ಲಿಂಗ್ ಡಾರ್ಲಿಂಗ್..

ಹೋಟೆಲ್ ಟೇಬಲ್ ಒಂದರ ಎದುರುಬದುರಿನಲ್ಲಿ ಒಂದು ಕಡೆ ನವ ದಂಪತಿ, ಮತ್ತೊಂದೆಡೆ ಎಂಬತ್ತರ ಆಜೂಬಾಜು ವಯಸ್ಸಿನ ದಂಪತಿ ಊಟಕ್ಕೆ ಕುಳಿತಿದ್ದರು. ವಯಸ್ಸಾದ ಗಂಡ, ಹೆಂಡತಿಗೆ ಪದೇಪದೇ 'ಡಾರ್ಲಿಂಗ್ ಡಾರ್ಲಿಂಗ್' ಎಂದು ಕರೆಯುತ್ತಿದ್ದ. ಇದನ್ನು ಗಮನಿಸಿದ ನವದಂಪತಿ ಈ ವಯಸ್ಸಿನಲ್ಲೂ ಅಜ್ಜನಿಗೆ ತನ್ನ ಹೆಂಡತಿಯ ಮೇಲೆ ಎಷ್ಟೊಂದು ಪ್ರೀತಿ. ಹೆಂಡತಿಯನ್ನು ಹೆಸರಿನಿಂದ ಕರೆಯದೇ 'ಡಾರ್ಲಿಂಗ್, ಡಾರ್ಲಿಂಗ್' ಎಂದು ಕರೆಯುತ್ತಿದ್ದಾರಲ್ಲ ಎಂದು ಖುಷಿ ಪಟ್ಟರು.

ಅಜ್ಜ ಮತ್ತು ಯುವಕ ಇಬ್ಬರೂ ಒಮ್ಮೆಲೆ ಕೈತೊಳೆಯಲು ವಾಶ್ ಬೇಸಿನ್ ಹತ್ತಿರ ಹೋದರು. ಆಗ ಯುವಕ ಅಜ್ಜನನ್ನು ಉದ್ದೇಶಿಸಿ 'ಸಾರ್, ನಿಮ್ಮ ಹೆಂಡತಿಯ ಮೇಲೆ ಎಷ್ಟೊಂದು ಪ್ರೀತಿ ಇದೆ. ಈ ವಯಸ್ಸಿನಲ್ಲೂ ಡಾರ್ಲಿಂಗ್ ಡಾರ್ಲಿಂಗ್ ಎಂದು ಕರೆಯುತ್ತೀರಿ' ಎಂದ. ಆಗ ಅಜ್ಜ 'ಅಯ್ಯೋ ಎಲ್ಲಿಯ



ಪ್ರೀತಿ ಮಾರಾಯ. ಹತ್ತು ವರ್ಷದಿಂದ ಹೆಂಡತಿಯ ಹೆಸರು ಮರೆತುಹೋಗಿದೆ. ಆಗಿನಿಂದಲೂ ಡಾರ್ಲಿಂಗ್, ಡಾರ್ಲಿಂಗ್ ಎಂದು ಕರೆಯುತ್ತಿದ್ದೇನೆ' ಎಂದಾಗ ಯುವಕ 'ಭಲೇ ಕಿಲಾಡಿ ತಾತ' ಎಂದು ನಕ್ಕ.

**ಬಿ. ಬಸವರಾಜ್**

---

## ಆಗ ನೆನಪಾಯಿತು

ಬೆಂಗಳೂರಿನ ಜಯನಗರ 4ನೇ ಬ್ಲಾಕ್‌ನ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಬಂದ ಗಿರಿಜಾ ತನ್ನ ಎರಡೂ ಕೈಗಳಿಗೆ ಮೆಹಂದಿ ಹಾಕಿಸಿಕೊಂಡಳು.

ನಂತರ ತಾನು ತನ್ನ ಸ್ಕೂಟಿಯಲ್ಲಿ ಬಂದಿರುವ ಬಗ್ಗೆ ನೆನಪಿಸಿಕೊಂಡು ಬಹಳ ಬೇಸರದಿಂದ ಅಲ್ಲಿಯೇ ಅಂಗಡಿಯ ಬಳಿಯೇ ಕುಳಿತಿದ್ದಳು. ಆಗ ಅಲ್ಲಿಗೆ ಬಂದ ಆಕೆಯ ಪಕ್ಕದ ಮನೆಯಾತ ಗಿರಿಜಾಳನ್ನು ನೋಡಿ ಮಾತನಾಡಿಸಿ, ಅವಳದೇ ದ್ವಿಚಕ್ರ ವಾಹನದಲ್ಲಿ ಅವಳನ್ನು ಕೂರಿಸಿಕೊಂಡು ಜೆ.ಪಿ. ನಗರದ ಮನೆಯ ಬಳಿ ಬಂದಾಗ ಅವನಿಗೆ ತಾನು ಜಯನಗರ 4ನೇ ಬ್ಲಾಕ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ತನ್ನ ಬೈಕ್ ಮತ್ತು ಹೆಂಡತಿಯನ್ನು ಬಿಟ್ಟು ಬಂದಿರುವುದು ನೆನಪಾಯಿತು...!

**ವಿ. ಹೇಮಂತ ಕುಮಾರ್**

